<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ. ಸಂಖ್ಯೆ: **3065/2025**</u>

<u>ಪಿರ್ಯಾದಿ</u> : ಶ್ರೀಮತಿ ದೀಪ್ತಿ.ಟಿ.ಬಿ,
ವಯಸ್ಸು ಸುಮಾರು 45 ವರ್ಷ,
ಕೋಂ ನಂದೀಶ್.ಕೆ.ಹೆಚ್,
ವಾಸಃ ಕೂಳೂರು ಗ್ರಾಮ,
ಬೆಟ್ಟಗೆರೆ ಅಂಚೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

<u>ಆರೋಪಿ</u> : **ಶ್ರೀ ಲೋಕೇಶ್.ಹೆಚ್.ಜೆ,**
ವಯಸ್ಸು ಸುಮಾರು 45 ವರ್ಷ,
ಬಿನ್ ಜೋಸೆಫ್,
ವಾಸಃ ಹೊರಟ್ಟಿ ಗ್ರಾಮ,
ಕೆಂಜಿಗೆ ಅಂಚೆ,
ಮೂಡಿಗೆರೆ ತಾಲ್ಲೂಕು.

<u>ಆಪಾದನೆಯ ಸಾರಾಂಶ</u>

**ಶ್ರೀ ಯೋಗೇಶ.ಎಂ.ಆರ್.,** ಬಿ.ಎ.,ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ಪಿರ್ಯಾದುದಾರರನ್ನು ಸಂಪರ್ಕಿಸಿ, ನಿಮ್ಮ ಕುಟುಂಬದ ತುರ್ತು ಹಣದ ಅವಶ್ಯಕತೆಗಳಿಗಾಗಿ ಅವರಿಂದ 1,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡಾ, ಮೂಡಿಗೆರೆ ಶಾಖೆಯ ಚೆಕ್ ಸಂಖ್ಯೆ: 000005, ದಿನಾಂಕ 19.09.2025, ರೂ.1,00,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಕರ್ನಾಟಕ ಸ್ಟೇಟ್, ಮೂಡಿಗೆರೆ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds Insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 08.10.2025 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟರುಮೆಂಟ್ ಆಕ್ಟ್ ಕಲಂ **138** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

| | | |
|---|---|---|
| ಪ್ರಶ್ನೆ 1 | : | ಈಗ  ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿರುತ್ತದೆಯೇ? |
| ಉ | : | ತಿಳಿಯಿತು. |
| ಪ್ರಶ್ನೆ 2 | : | ಮೇಲೆ ಹೇಳಿದ ಚೆಕ್ ನಿಮ್ಮ ಖಾತೆಗೆ ಸಂಬಂಧಪಟ್ಟಿದ್ದು ಎಂದು ಒಪ್ಪಿಕೊಳ್ಳುವಿರಾ? |
| ಉ | : | |
| ಪ್ರಶ್ನೆ 3 | : | ಚೆಕ್ ಮೇಲಿರುವ ಸಹಿ ನಿಮ್ಮದು ಎಂದು ಒಪ್ಪಿಕೊಳ್ಳುವಿರಾ? |
| ಉ | : | |
| ಪ್ರಶ್ನೆ 4 | : | ನೀವು ದೂರುದಾರರಿಗೆ ಚೆಕ್ಕನ್ನು ನೀಡಿದ್ದೀರಾ? |
| ಉ | : | |
| ಪ್ರಶ್ನೆ 5 | : | ಹೌದಾದರೆ, ಆ ಸಮಯದಲ್ಲಿ ದೂರುದಾರರಿಗೆ ಯಾವುದಾದರೂ ಸಾಲ ಕೊಡುವುದು ಬಾಕಿ ಇತ್ತಾ? |
| ಉ | : | |
| ಪ್ರಶ್ನೆ 3 | : | ನಿಮ್ಮ ಪ್ರತಿರಕ್ಷೆ ಏನು? |
| ಉ | : | |
| ಪ್ರಶ್ನೆ | : | ಈ ಹಂತದಲ್ಲಿ ನೀವು ಪ್ರಕರಣವನ್ನು ರಾಜಿ ಮಾಡಿಕೊಳ್ಳಲು ಇಚ್ಚಿಸುತ್ತೀರಾ? |
| ಉ | : | |

*(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಅವರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಓದಿ, ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)*

**Sd/-**

**(ಯೋಗೇಶ.ಎಂ.ಆರ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ, ಮೂಡಿಗೆರೆ.**

ಮೂಡಿಗೆರೆ
ದಿನಾಂಕಃ 09.07.2026